## ನಮ್ಮ ಸನಾತನ ಸಂಸ್ಕೃತಿಯನ್ನು ಹಾಳು ಮಾಡುತ್ತಿರುವವರು ಯಾರು?

ಗಣಪತಿಯ ಹಬ್ಬ ಬಂದಿದೆ. ಬೀದಿ ಬೀದಿಗಳಲ್ಲಿ ಕಲರುಕಲರಿನ ಗಣಪತಿಯ, ಅಸಹ್ಯ ಪದಾರ್ಥಗಳಿಂದ ಮಾಡಿದ, ವಿಕಾರದ ಬೊಂಬೆಗಳು ಬಂದು ಕುಳಿತಿವೆ. ನೋಡಿನೋಡಿ ಮನಸ್ಸು ರೋಸಿ ಹೋಗುತ್ತ ಇದೆ.

ನಮ್ಮ ಪ್ರಾಚೀನ ಋಷಿಮುನಿಗಳು ನಮ್ಮ ಮೇಲೆ ಅದೆಷ್ಟು ಕಾರುಣ್ಯವನ್ನು ತೋರಿದ್ದಾರೆ, ನಮ್ಮ ಕಣ್ಣಿಗೆ ಕಾಣದ ಭಗವಂತನನ್ನು, ದೇವತೆಗಳನ್ನು ತಮ್ಮ ನಿತಾಂತ ತಪಸ್ಸಿನಿಂದ ಸಾಕ್ಷಾತ್ಕರಿಸಿಕೊಂಡು ಅವರು ಹೇಗಿದ್ದಾರೆ ಎನ್ನುವದನ್ನು ಕಂಡು ನಮಗಾಗಿ ಬರೆದಿಟ್ಟು ಹೋಗಿದ್ದಾರೆ.

ಆದರೆ ನಾವು, ನಮ್ಮ ಪ್ರಾಚೀನರಿಗೆ ಬೆಲೆಯನ್ನೇ ನೀಡುವದಿಲ್ಲ. ಆ ಋಷಿಮುನಿಗಳ ತಪಸ್ಸಿನ ಫಲವನ್ನು ಎಡಗಾಲಿನಿಂದ ಒದ್ದು, ಅವರ

ಕಾರುಣ್ಯವನ್ನು ತಿರಸ್ಕರಿಸಿ ಮನಸ್ಸಿಗೆ ಬಂದಂತೆ ವರ್ತಿಸುತ್ತಿದ್ದೇವೆ.

ಗಣಪತಿಯ ಕೈಯಲ್ಲಿ ಬ್ಯಾಟನ್ನು ಕೊಟ್ಟು ಸಚಿನ್ ತೆಂಡೂಲ್ಕರನ ಹಾಗೆ ಮುಖ ಮಾಡಿ, ಗಣಪತಿಯನ್ನು ಸ್ಕೂಟರಿನ ಮೇಲೆ ಕೂಡಿಸಿ, ಗಣಪತಿಗೆ ಗಾಗಲ್ಸ್ ಹಾಕಿ, ಗಡ್ಡ ಬಿಡಿಸಿ ಏನಿದು ಅಸಹ್ಯ ವಿಕಾರಗಳು? ದೇವರ ಪೂಜೆಯಲ್ಲಿಯೂ ಕ್ರಿಕೆಟ್ಟು ಬೇಕಾ, ಸಿನಿಮಾ ಬೇಕಾ? ಅವುಗಳಿಂದ ನಮ್ಮ ಜನಾಂಗದ ಮನಸ್ಸೇ ಹಾಳಾಗಿ ಹೋಗಿದೆ, ಅದನ್ನು ಸರಿಪಡಿಸಲಿಕ್ಕಾಗಿ, ದೇವರ ಪೂಜೆ, ಆರಾಧನೆಗಳು. ಪ್ರಶಾಂತವಾಗಿ ನಡೆಯಬೇಕಾದ ಪೂಜೆಯಲ್ಲಿ ಇಂತಹ ಮನಸ್ಸನ್ನು ಹಾಳು ಮಾಡುವ ವಿಕಾರಗಳು ಬೇಕಾ?

ಇನ್ನು ಗಣಪತಿಯ ಪೂಜೆಯಲ್ಲಿ ಹಾಕುವ ತಾರಕ ಸ್ವರದ ಸಿನಿಮಾ ಹಾಡುಗಳು. ಛೀ. ಮುಸಲ್ಮಾನರ ಮಸೀದಿಗಳಲ್ಲಿ ಎಂದಾದರೂ ಬಾಲಿವುಡ್ಡಿನ ಹಾಡುಗಳನ್ನು ಹಾಕಿದ್ದು ನೀವು ಕೇಳಿದ್ದೀರಾ? ದಿವಸಕ್ಕೆ ಐದು ಬಾರಿ ತಾರಕಸ್ವರದಲ್ಲಿ ಇಡಿಯ ಊರಿಗೆ ಅವರ ಅಸ್ತಿತ್ವವನ್ನು ಸಾರಿ ಹೇಳುತ್ತಾರೆ,

ಚರ್ಚಿನಲ್ಲಿ ಗಂಟೆಯ ಶಬ್ದವನ್ನು ಬಿಟ್ಟು ಪಾಪ್ ಸಂಗೀತದ ಗಾಯನವನ್ನು ಕೇಳಿದ್ದೀರ? ಆದರೆ ನಮ್ಮವರು ಗಣಪತಿಯ ಹಬ್ಬದಲ್ಲಿ ಆರ್ಕೆಸ್ಟ್ರಾಗಳು, ಸಿನಿಮಾಗಳ ಅಸಹ್ಯ ಸಾಹಿತ್ಯದ ಹಾಡುಗಳು. ಹಿಂದೂಧರ್ಮಕ್ಕೆ ಮಸಿ ಬಳಿಯುತ್ತಿರುವವರು ಯಾರು? ನಮ್ಮವರೇ ಅಲ್ಲವೇನು?

ಯಾಕೆ, ಗಣಪತಿಯ ಹಬ್ಬದಲ್ಲಿ ಸುಶ್ರಾವ್ಯ ಸಂಗೀತದ ಕಾರ್ಯಕ್ರಮಗಳನ್ನು ಏರ್ಪಡಿಸಲು ಸಾಧ್ಯವಿಲ್ಲವಾ? ಸಂಗೀತಪ್ರಿಯನಾದ ಗಣಪತಿಯನ್ನು ಸಂಗೀತದಿಂದ ಅರ್ಚನೆಯನ್ನು ಮಾಡಲು ಸಾಧ್ಯವಿಲ್ಲವಾ?

ಇನ್ನು ಮನೆಮನೆಯಲ್ಲಿ ನಡೆಯುವ ವಿಕಾರಗಳು. ನಮಗೆ ಗಣಪತಿಯ ಪೂಜೆಗಿಂತ ಅಡಂಬರಕ್ಕೇ ಹೆಚ್ಚಿನ ಬೆಲೆ. ಗಣಪತಿಗೆ ಮಾಡುವ ಮೊಟ್ಟಮೊದಲ ಅಪಚಾರ ಕೆಮಿಕಲ್ ಮೆತ್ತಿರುವ ಕಲರುಕಲರಿನ ಗಣಪತಿಯನ್ನು ತರುವದು. ಈಗಂತೂ ಪ್ಲಾಸ್ಟರ್ ಆಫ್ ಪ್ಯಾರಿಸ್ ನ ಗಣಪತಿಗಳು. ಆ ಬಳಿಕ ಮನೆಯಲ್ಲಿ ವಿಕೃತಗೊಂಡ

ಆಚಾರಗಳಿಂದ ಅವನ ಪೂಜೆ. ಊರಿನ ಎಂಜಲೆಲ್ಲ ಸೇರಿದ ಹೂಗಳಿಂದ ಗರಿಕೆಗಳಿಂದ ಅವನ ಪೂಜೆ.

ದೇವರು ನಮ್ಮ ಮೇಲೆ ಹೇಗೆ ತಾನೆ ಒಲಿಯಲು ಸಾಧ್ಯ?

ಶ್ರೀಕೃಷ್ಣಪರಮಾತ್ಮ ಭಗವದ್ಗೀತೆಯಲ್ಲಿ ಸ್ಪಷ್ಟವಾಗಿ ಹೇಳಿದ್ದಾನೆ —

ಅಶ್ರದ್ಧಯಾ ಹುತಂ ದತ್ತಂ
ತಪಸ್ತಪ್ತಂ ಕೃತಂ ಚ ಯತ್ ।
ಅಸದಿತ್ಯುಚ್ಯತೇ ಪಾರ್ಥ
ನಚ ತತ್ ಪ್ರೇತ್ಯ ನೋ ಇಹ ॥

ಅರ್ಜುನ, ದೇವರಲ್ಲಿ, ದೇವರ ವಾಕ್ಯಗಳಾದ ವೇದಗಳಲ್ಲಿ, ಋಷಿಮುನಿಗಳ ಆದೇಶಗಳಲ್ಲಿ ಶ್ರದ್ಧೆಯಿಲ್ಲದೇ ಮಾಡಿದ ಹೋಮ, ಕೊಟ್ಟ ದಾನ, ಆಚರಿಸಿದ ತಪಸ್ಸು, ಮಾಡುವ ಯಾವದೇ ಕರ್ಮ ಸತ್ಕರ್ಮ ಎಂದು ಕರೆಸಿಕೊಳ್ಳುವದಿಲ್ಲ. ಬದಲಾಗಿ, ಅಸತ್ ಇತ್ಯುಚ್ಯತೇ, ಅಸತ್ಕರ್ಮ ಎಂದು ಕರೆಸಿಕೊಳ್ಳುತ್ತದೆ. ಆದರಿಂದ ಈ ಲೋಕದಲ್ಲಿಯೂ

ಸತ್ಫಲ ಉಂಟಾಗುವದಿಲ್ಲ. ಆ ಲೋಕದಲ್ಲಿಯೂ ಸತ್ಫಲ ಉಂಟಾಗುವದಿಲ್ಲ. ಕೇವಲ ದುಷ್ಫಲವೇ.

ಹೀಗೆ ವಿಕೃತಿಯಿಂದ ಮಾಡುವ ಪೂಜೆ ಆರಾಧನೆಗಳನ್ನು ನಮ್ಮನ್ನು ಅನರ್ಥಕ್ಕೀಡು ಮಾಡುತ್ತವೆ. ಕನಿಷ್ಠ ಇಷ್ಟು ಎಚ್ಚರವಾದರೂ ನಮಗೆ ಗಣಪತಿಯ ಪೂಜೆ ಮಾಡುವದಕ್ಕಿಂತ ಮುಂಚೆ ಇರಬೇಕು.

ನಮ್ಮ ಪ್ರಾಚೀನ ಋಷಿಮುನಿಗಳು ಗಣಪತಿಯ ನಿಖರ ಸ್ವರೂಪವನ್ನು ತಿಳಿಸಿದ್ದಾರೆ. ಪರಿಶುದ್ಧವಾದ ಕ್ರಮದಲ್ಲಿ ಅವನನ್ನು ಆರಾಧಿಸಿದರೆ ಮಾತ್ರ ಅವನು ನಮಗೆ ಒಲಿಯುತ್ತಾನೆ.

ಗಣಪತಿಯ ಪೂಜೆಯಿಂದ ನಮ್ಮ ಮನೆಯ, ಕೆಲಸದ, ದಾಂಪತ್ಯದ, ಹಣದ ಅಡಚಣೆಗಳು ದೂರವಾಗುತ್ತವೆ. ಗಣಪತಿಯ ಪೂಜೆಯಿಂದ ನಮ್ಮ ಎಲ್ಲ ಕಾರ್ಯಗಳಲ್ಲಿ ಸಿದ್ಧಿ ದೊರಕುತ್ತದೆ. ಗಣಪತಿಯ ಪೂಜೆ ಉತ್ತಮ ದಾಂಪತ್ಯವನ್ನು, ಸದ್ಗುಣಿಗಳಾದ ಮಕ್ಕಳನ್ನೂ ಕರುಣಿಸುತ್ತವೆ. ಗಣಪತಿಯ ಪೂಜೆ ನಮಗೆ ಯಶಸ್ಸು, ಕೀರ್ತಿ,

ಸಂಪತ್ತು, ಸದ್ಗುಣಗಳನ್ನು ಕರುಣಿಸಿ ನಮ್ಮನ್ನು ಎಲ್ಲ ವಿಧದಿಂದಲೂ ಎತ್ತರಕ್ಕೆ ಕರೆದೊಯ್ಯುತ್ತದೆ.

ಆ ಸತ್ಫಲಗಳು ನಮಗೆ ದೊರೆಯಬೇಕಾದರೆ ಪರಿಶುದ್ಧ ಕ್ರಮದಲ್ಲಿಯೇ ಗಣಪತಿಯನ್ನು ಪೂಜೆ ಮಾಡಬೇಕು.

ಪ್ರತೀವರ್ಷದ ಗಣಪತಿಯ ಪೂಜೆಯಂದು  ಈ ನಿಯಮಗಳನ್ನು ಪಾಲಿಸಿ

ವಿಕೃತ ಆಕಾರಗಳ ಗಣಪತಿಯನ್ನು ತರಲೇ ಬೇಡಿ. ಅದರಿಂದಾಗುವಷ್ಟು ಅನರ್ಥ ಮತ್ಯಾವುದರಿಂದಲೂ ಆಗುವದಿಲ್ಲ. ನಮ್ಮ ಜೀವನವನ್ನೇ ವಿಕೃತಗೊಳಿಸಿಬಿಡುತ್ತದೆ ಆ ದುಷ್ಕರ್ಮ.

ಕಲರು ಹಚ್ಚಿದ ಗಣಪತಿಯನ್ನು ಸರ್ವಥಾ ತರಬೇಡಿ. ಶುದ್ಧ ಮಣ್ಣಿನಿಂದ ಮಾಡಿದ ಗಣಪತಿಯನ್ನು ತೆಗೆದುಕೊಂಡು ಬನ್ನಿ.

ಕೊಂಡ ಹೂಗಳಿಂದ, ಕೊಂಡ ಗರಿಕೆಗಳಿಂದ ಗಣಪತಿಯನ್ನು ಪೂಜಿಸಬೇಡಿ. ಮನೆಯಲ್ಲಿ ಬೆಳೆದ

ಹೂಗಳಿದ್ದರೆ, ಪೂಜಿಸಿ ಇಲ್ಲದಿದ್ದರೆ ಹೂಗಳ ಹೆಸರನ್ನು ಹೇಳಿ ಮನಸ್ಸಿನಿಂದ ಅರ್ಪಿಸಿ, ಗಣಪತಿ ಒಲಿಯುತ್ತಾನೆ.

ಗಣಪತಿಯ ಪೂಜೆಗಾಗಿ ಪ್ರಯತ್ನ ಪಟ್ಟು ಶುದ್ಧ ಗರಿಕೆಗಳನ್ನು ನೀವೇ ತನ್ನಿ. ಮನೆಯ ಕೆಲಸದವರಿಗೆ ಹೇಳಿ ದುರಹಂಕಾರದಿಂದ ತರಿಸುವದು ಬೇಡ. ಭಕ್ತಿಯಿಂದ ನೀವೇ ಹೋಗಿ ತನ್ನಿ. ಒಂದು ಪಾಟಿನಲ್ಲಿ ಗರಿಕೆಯನ್ನೂ ಬೆಳೆಸದಷ್ಟು ದೌರ್ಭಾಗ್ಯ ಯಾರಿಗೂ ಬಾರದಿರಲಿ.

ಗಣಪತಿಯನ್ನು ಕೂಡಿಸಲಿಕ್ಕಾಗಿ, ಹುಡುಗರು ಬಂದರೆ, ವಿಕೃತಗಣಪತಿಯನ್ನು ಕೂಡಿಸಬಾರದು, ಕೂಡಿಸಿದರೆ ಬಂದು ಬೈಯುತ್ತೇವೆ ಎಂದು ಹೇಳಿ. ಅವರಿಗೂ ತಿಳುವಳಿಕೆಯನ್ನು ನೀಡಿ.

ಗಣಪತಿಯನ್ನು ಕೂಡಿಸಿದಾಗ, ಕಿವಿಗೆ ಇಂಪಾಗುವಷ್ಟು ಧ್ವನಿಯಲ್ಲಿ ದೇವರ ಕೀರ್ತನೆಗಳನ್ನು ಮಾತ್ರ ಹಾಕಬೇಕು, ಸಿನಿಮಾ ಹಾಡುಗಳನ್ನು ಹಾಕಬಾರದು, ಕರ್ಕಶವಾಗಿ ಹಾರಬಾರದು ಎಂದು ತಾಕೀತು ಮಾಡಿ.

ಮುಸಲ್ಮಾನರು ಹಾಕುತ್ತಾರೆ, ನಾವೂ ಜೋರಾಗಿ ಹಾಕುತ್ತೇವೆ ಎಂದು ಧ್ವನಿಯಲ್ಲಿ ಸ್ಪರ್ಧೆಗಿಳಿಯುವದು ಬೇಡ. ಇನ್ನೊಬ್ಬರಿಂದ ನಾವು ಒಳ್ಳೆಯದನ್ನು ಕಲಿಯಬೇಕೇ ಹೊರತು, ಕೆಟ್ಟದ್ದನ್ನಲ್ಲ.

ಮಣ್ಣಿನಿಂದ ಮಾಡಿದ ಗಣಪತಿಯನ್ನೇ ಪೂಜಿಸಿ. Plastic ನಿಂದ, Gypsum (Plaster of Paris) ನಿಂದ ಅಥವಾ ಬೇರೆ ಯಾವುದೇ ಕೆಮಿಕಲ್ಲಿನಿಂದ ಮಾಡಿದ ಗಣಪತಿಯನ್ನು ತರಬೇಡಿ.

ಕಲರು ಹಚ್ಚಿದ ಗಣಪತಿಯನ್ನು ತರಬೇಡಿ. ಶುದ್ಧ ಜೇಡಿ ಮಣ್ಣಿನ ರೂಪವಿರಲಿ. ಮನೆಗೆ ತಂದು ಸಂಜೆ ಗಂಡ ಹೆಂಡತಿ ಮಕ್ಕಳು ಕುಳಿತು ಸಿಂಧೂರ, ಕುಂಕುಮಗಳಿಗೆ ಸ್ವಲ್ಪ ತುಪ್ಪ ಮತ್ತು ನೀರು ಸೇರಿಸಿ ಮಣ್ಣಿನ ಗಣಪತಿಯನ್ನು ಕೆಂಪು ಬಣ್ಣದ ಗಣಪತಿನ್ನಾಗಿ ಮಾಡಿ. ಕಾಡಿಗೆಯಲ್ಲಿ ಕಣ್ಣನ್ನು ಬರೆಯಿರಿ. ನಿಮ್ಮನಿಮ್ಮ ಮನೆಯ ಸಂಪ್ರದಾಯದಂತೆ ಗೋಪೀಚಂದನ ಅಕ್ಷತೆಗಳನ್ನೋ, ವಿಭೂತಿಯ ನಾಮಗಳನ್ನೋ ಹಚ್ಚಿ ಸಿಂಧೂರದ ತಿಲಕವನ್ನಿಡಿ.

ಗಣಪತಿಯ ಪೂಜೆಯನ್ನು ಶುದ್ಧವಾದ ರೀತಿಯಲ್ಲಿ ಮಾಡಿ. ಅವನು ಕಾರುಣ್ಯದಿಂದ ಅನುಗ್ರಹಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

# ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು**
**ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ


**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491